ಅ) ಗುಲ್ಬರ್ಗಾ ವಿಶ್ವವಿದ್ಯಾನಿಲಯದಲ್ಲಿ ವೈಕೊಬಯೊಲಜಿ, ಉರ್ದು ಮತ್ತು ಸಂಸ್ಕೃತ ವಿಷಯಗಳಿಗೆ ಸಂಬಂಧಿಸಿದ ಹುದ್ದೆಗಳನ್ನು ಹರಿಜನರ ಅಭ್ಯರ್ಥಿಗಳಿಗಾಗಿ ಕಾದಿರಿಸಿದ್ದಿದು ಸರ್ಕಾರದವರ ಗಮನಕ್ಕೆ ಬಂದಿದೆಯೆ.,

ಆ) ಈ ವರೆಗೆ ಎಷ್ಟು ಹರಿಜನಪದವಿಧರರು ಈ ಹುದ್ದೆಗಳಿಗಾಗಿ ಅರ್ಜಿ ಹಾಕಿದ್ದಾರೆ ?

ಇ) ಈ ಹುದ್ದೆಗಳಿಗಾಗಿ ಎಂದಿನಿಂದ ಹರಿಜನ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಕೇಳ ಲಾಗುತ್ತಿದೆ.

ಶ್ರೀ. ರಾಚಯ್ಯ(ಶಿಕ್ಷಣ ಸಚಿವರು)

ಅ) ಹೌದು

ಆ) ವೈಕೊಬಯೊಲಜಿ,

ಪ್ರೊಫೆಸರ್,	)	
ರೀಡರ್	)	ಇಲ್ಲ
ಲೆಕ್ಚರರ್ಸ್	)	
ಉರ್ದು		
ರೀಡರ್ಸ್	)	ಇಲ್ಲ
ಲೆಕ್ಚರರ್ಸ್	)	
ಸಂಸ್ಕೃತ		
ರೀಡರ್	ಹರಿಜನ	–೧
ಲೆಕ್ಚರರ್ಸ್	ಹರಿಜನ	–೨

ಇ) ೨೦–೮–೧೯೮೧ ರಿಂದ.

ಮಾನ್ಯ ಸದಸ್ಯರು ಹಾಜರಿರಲಿಲ್ಲ.

ಹಣ್ಣು ಮಂತ್ರ ತರಕಾರಿ ಸಹಕಾರಿ ಸಂಘಗಳನ್ನು ಸ್ಥಾಪಿಸಿ ರೈತರಿಗೆ ಮಧ್ಯವರ್ತಿಗಳ ಕಾಟ ತಪ್ಪಿಸುವ ಬಗ್ಗೆ.

೨೭೬. ಶ್ರೀ ಬಿ. ಆರ್. ಪಾಟೀಲ್.(ಅಲಂದ್)—ಮಾನ್ಯ ಪಶು ಸಂಗೋಪನೆ ಪಶುವೈದ್ಯ ಮತ್ತು ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಹಣ್ಣು ಮತ್ತು ತರಕಾರಿಗಳ ವ್ಯಾಪಾರವನ್ನು ಸರ್ಕಾರದ ನಿಯಂತ್ರಣದಲ್ಲಿರುವ ಸಹಕಾರಿ ಸಂಘಗಳ ಮೂಲಕ ಮಾಡಿಸ ಬೆಳೆಗಾರರಿಗೆ ಯೋಗ್ಯ ಬೆಲೆ ದೊರಕಿಸಲು ಮತ್ತು ಮಧ್ಯ ವರ್ತಿಗಳ ತೊಂದರೆಯನ್ನು ತಪ್ಪಿಸಿ ನಿವಾರಿಸಲು ಈ ಹಿಂದೆ ಯೋಜನೆಯೊಂದನ್ನು ರೂಪಿಸಿದ್ದುದ ಸರ್ಕಾರದವರ ಗಮನಕ್ಕೆ ಬಂದಿದೆಯೆ,

ಆ) ಹಾಗಿದ್ದಲ್ಲಿ ಸರ್ಕಾರದವರು ಈ ಯೋಜನೆಯನ್ನು ಕಾರ್ಯಗತವಾಡದಿರಲು ಕಾರಣಗಳೇನು

ಇ) ಇಂಥಹ ಯೋಜನೆಯನ್ನು ರೂಪಿಸಿ ಬೆಳೆಗಾರರಿಗೆ ಯೋಗ್ಯ ಬೆಲೆ ದೊರೆಯುವಂತೆ ಹಾಗೂ ಮಧ್ಯವರ್ತಿಗಳ ತೊಂದರೆಯನ್ನು ತಪ್ಪಿಸಿ ಗ್ರಾಹಕರಿಗೆ ಹಣ್ಣು ಮತ್ತು ತರಕಾರಿಗಳಂ ಯೋಗ್ಯ ಬೆಲೆಗೆ ದೊರೆಯುವಂತೆ ಕ್ರಮ ತೆಗೆದುಕೊಳ್ಳುವ ಉದ್ದೇಶ ಸರ್ಕಾರದವರಿಗಿದೆಯೆ ?

ಶ್ರೀ ವಿಶ್ವನಾಥ್ ರೆಡ್ಡಿ ಮುದ್ನಾಳ್.—ಪಶುಸಂಗೋಪನೆ, ಪಶುವೈದ್ಯ ಮತ್ತು ತೋಟಗಾರಿಕೆ ಸಚಿವರು.

ಅ) ಹೌದು, ಬಂದಿದೆ

ಅ) ಸರ್ಕಾರ ಈಗಾಗಲೇ ಈ ಯೋಜನೆಗೆ ಮಂಜೂರಾತಿ ನೀಡಿದ್ದು ಆದನ್ನು ಜಾರಿಗೊಳಿಸಲಾಗಿದೆ.

ಇ) ಹೌದು, ಈ ಉದ್ದೇಶದಿಂದಲೇ ಸರ್ಕಾರ, ಈಗಾಗಲೇ ಈ ಯೋಜನೆಯನ್ನು ಜಾರಿಗೊಳಿಸಿದೆ.

ಮಾನ್ಯ ಸದಸ್ಯರು ಹಾಜರಿರಲಿಲ್ಲ.

ಪಿ. ಯು. ಸಿ. ಅಂಕಪಟ್ಟಿಯ ಬಗ್ಗೆ ಭ್ರಷ್ಟಾಚಾರದ ಆರೋಪಗಳಿಗೆ ಸಂಬಂಧಿಸಿದ ವರದಿಯನ್ನು ಜಾರಿಗೊಳಿಸುವುದು

೨೨೯ ಶ್ರೀ ಪಿ. ರಾಂದೇವ್ (ಮಲ್ಲೇಶ್ವರ) ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶಿಕ್ಷಣ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಪಿ. ಯು. ಸಿ. ಅಂಕಪಟ್ಟಿಯ ಭ್ರಷ್ಟಾಚಾರದ ಬಗ್ಗೆ ಸಿ. ಒ. ಡಿ. ವರದಿಯ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು, ;

ಆ) ಈ ಹಗರಣದಲ್ಲಿ ಸಿ. ಒ. ಡಿ. ಯ ವರದಿಯ ಸಾರಂಶಗಳೇನು,

ಇ) ಭ್ರಷ್ಟಾಚಾರದ ಮೂಲಕ ಅಂಕ ಪಟ್ಟಿಯನ್ನು ಪಡೆದ ವಿದ್ಯಾರ್ಥಿಗಳು ಮುಂದಿನ ತರಗತಿಗಳಲ್ಲಿ ಓದುತ್ತಿರುವುದನ್ನು ನಿಲ್ಲಿಸಲು ಸರ್ಕಾರದವರು ಅಥವಾ ವಿಶ್ವವಿದ್ಯಾನಿಲಯ ಕೈಗೊಂಡ ಕ್ರಮಗಳೇನು ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

ಅ) ಸಿ. ಒ. ಡಿ. ಯ ವರದಿಯನ್ನು ಕಾಯಲಾಗಿದೆ.

ಆ) ಮೇಲಿನ ಉಪವಾಕ್ಯ (ಅ)ರ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ರಾಜ್ಯ ಜಾಗೃತ ಆಯೋಗದ ಶಿಫಾರಸ್ಸಿನ ಮೇಲೆ ಈ ವಿಷಯವನ್ನು ಪಿ. ಯು. ಸಿ. ಮಂಡಳಿಯವರಿಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ತಿಳಿಸಲಾಗಿದೆ. ಪಿ. ಯು. ಸಿ. ಮಂಡಳಿಯು ಸಂಬಂಧ ಪಟ್ಟವರಿಗೆ ಷೋಕಾಸ್ ನೋಟೀಸ್ ನೀಡಿ ಮರು ಪರಿಶೀಲಿತ ಸರಿಯಾದ ಅಂಕಪಟ್ಟಿಗಳನ್ನು ನೀಡಲು ಕ್ರಮ ತೆಗೆದುಕೊಂಡಿದೆ.

ಶ್ರೀ ಪಿ. ರಾಂದೇವ್.—ಜಾಗೃತ ಆಯೋಗದವರ, ಈ ಬಗ್ಗೆ ಶಿಫಾರಸ್ ಮಾಡಿದ್ದಾರೆ ಎಂದು ಹೇಳಿದ್ದೀರಿ. ಆ ಶಿಫಾರಸ್‌ಗಳ ವಿವರಗಳನ್ನು ಸ್ವಲ್ಪ ಕೊಡುತ್ತೀರಾ ? ಎಷ್ಟು ಜನ ವಿದ್ಯಾರ್ಥಿಗಳು ಇದರಲ್ಲಿ ಸೇರಿದ್ದಾರೆ, ಎಷ್ಟು ಜನ ಅಧಿಕಾರಿಗಳ ಮಕ್ಕಳು ಮತ್ತು ಎಷ್ಟು ಜನ ರಾಜಕಾರಿಣಿಗಳ ಮಕ್ಕಳು ಇದರಲ್ಲಿ ಒಳಗೊಂಡಿದ್ದಾರೆಂಬುದನ್ನು ಹೇಳುತ್ತೀರಾ ? ದೊಡ್ಡವರ ಮಕ್ಕಳು ಇದರಲ್ಲಿ ಸೇರಿರುವುದರಿಂದ ಕ್ರಮ ತೆಗೆದುಕೊಳ್ಳಲು ತಡ ಮಾಡಲಾಗುತ್ತಿದೆ. ಎಂದು ಹೇಳಲಾಗುತ್ತಿದೆ. ಆದ್ದರಿಂದ ಅಂತಹ ವಿದ್ಯಾರ್ಥಿಗಳ ತಂದೆ ತಾಯಿಗಳು ಯಾರು ಎಂಬು ವಿವರ ಕೊಡುತ್ತೀರಾ ?

ಅಧ್ಯಕ್ಷರು.—ನೀವು ಪೇರೆಂಟೋ ಅಥವಾ ವಿದ್ಯಾರ್ಥಿಯೋ ?

ಶ್ರೀ ಪಿ. ರಾಂದೇವ್.—ನಾನು ಪೇರೆಂಟಂತೂ ಅಲ್ಲ.

ಶ್ರೀ ಬಿ ರಾಚಯ್ಯ.—ವಿದ್ಯಾರ್ಥಿಗಳ ವಿವರಗಳು ಈಗ ನನ್ನ ಹತ್ತಿರ ಇಲ್ಲ.

ಶ್ರೀ ಪಿ. ರಾಂದೇವ್.—ಪ್ರಭಾವಶಾಲಿಗಳ ಮಕ್ಕಳು ಇದರಲ್ಲಿ ಸೇರಿರುವುದರಿಂದ ಜಾಗೃತ ಆಯೋಗದ ಶಿಫಾರಸ್‌ನ ಮೇಲೆ ಕ್ರಮ ತೆಗೆದುಕೊಳ್ಳದೆ ನಿಧಾನ ಮಾಡಲಾಗುತ್ತಿದೆ. ಎಂಬತಕ್ಕ೦ಥ ಅಪಾದನೆ ಈ ಸರ್ಕಾರದ ಮೇಲಿದೆ. ಈ ಪ್ರಕರಣದಲ್ಲಿ ಒಳಗಾದಂಥ ವಿದ್ಯಾರ್ಥಿಗಳು ಈಗಾಗಲೇ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಲ್ಲಿ ಓದುತ್ತಿದ್ದಾರೆ. ಒಂದೆರಡು ವರ್ಷಗಳ ನಂತರ ಇವರೆನ್ನೆಲ್ಲಾ ಈ ದೋಷಾರೋಪಣೆಯಿಂದ ಪಾರುಕ್ತರನ್ನಾಗಿ ಮಾಡಲಾಗುತ್ತದೆಂಬ ಆರೋಪಣೆ ಸಹ ಇದೆ. ಇದಕ್ಕೆ ತಾವು ಏನು ಹೇಳುತ್ತೀರಿ ?